


International Journal of Kannada Research
www.kannadajournal.com

**ISSN: 2454–5813**
IJKR 2021; 7(2): 33-37
© 2021 IJKR
www.kannadajournal.com
Received: 20-02-2021
Accepted: 24-03-2021

**ಸತೀಶ್ ಎ**
ಸಂಶೋಧನಾ ವಿದ್ಯಾರ್ಥಿ,
ಮಂಗಳೂರು ವಿಶ್ವವಿದ್ಯಾಲಯ,
ಮಂಗಳೂರು, ಕರ್ನಾಟಕ, ಭಾರತ

**Corresponding Author:**
**ಸತೀಶ್ ಎ**
ಸಂಶೋಧನಾ ವಿದ್ಯಾರ್ಥಿ,
ಮಂಗಳೂರು ವಿಶ್ವವಿದ್ಯಾಲಯ,
ಮಂಗಳೂರು, ಕರ್ನಾಟಕ, ಭಾರತ

# ಯಕ್ಷಗಾನ ಕಲೆ ಮತ್ತು ಸಾಮಾಜಿಕ ಜಾಗೃತಿ

**ಸತೀಶ್ ಎ**

**ಯಕ್ಷಗಾನ**

ಯಕ್ಷಗಾನ ಕಲೆಯು ಕರ್ನಾಟಕದ ಒಂದು ಸಾಂಸ್ಕೃತಿಕ ಹೆಗ್ಗುರುತು. ಸಂಗೀತ, ವೇಷಭೂಷಣ, ಕುಣಿತ ಹಾಗೂ ಮಾತುಗಾರಿಕೆಯೆಂಬ ವೈಶಿಷ್ಟ್ಯಪೂರ್ಣತೆಯಿಂದ ಸಾಗಿ ಬಂದ ಈ ಕಲೆಯು ಸಮೃದ್ಧವೂ ಆದ ಸಮಷ್ಟಿ ಕಲೆಯಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿಬೆಳೆದ ಯಕ್ಷಗಾನ ಕಲೆಯು ನಮ್ಮ ಜನಜೀವನ ಹಾಗೂ ಸಂಸ್ಕೃತಿಯ ಒಂದು ಅಂಗವಾಗಿ ಬೆಳೆದುಬಂದಿವೆ.

ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಯಕ್ಷಗಾನವು ದಶವತಾರ, ಬಯಲಾಟ, ಆಟ, ಭಾಗವತರಾಟ ಮುಂತಾದ ಹೆಸರುಗಳಿಂದ ಗುರುತಿಸಲ್ಪಟ್ಟಿದೆ. ಕರ್ನಾಟಕದ ಅತ್ಯುನ್ನತ ಪ್ರದರ್ಶನ ಕಲೆಗಳಲ್ಲಿ ಯಕ್ಷಗಾನ ಬಯಲಾಟವು ಅಗ್ರಸ್ಥಾನವನ್ನು ಪಡೆಯುತ್ತದೆ. ಕರ್ನಾಟಕದಾದ್ಯಂತ ಪ್ರಾದೇಶಿಕ ಭೇದಗಳೊಡನೆ ಕಂಡು ಬರುವ ಈ ಯಕ್ಷಗಾನ ತನ್ನ ಎಲ್ಲಾ ವೈವಿಧ್ಯತೆಗಳೊಡನೆ ಕರಾವಳಿಯಲ್ಲಿ ಸಮೃದ್ಧವಾಗಿ ಬೆಳೆದು ಬಂದಿದೆ. ಭಾರತೀಯ ಪುರಾಣಗಳ ಸಂದೇಶವನ್ನು, ಭಾರತೀಯ ಸಂಸ್ಕೃತಿಯ ಸಂದೇಶವನ್ನು ಶ್ರೀಸಾಮಾನ್ಯನ ಚಿತ್ತಕ್ಕೆ ವರ್ಗಾಯಿಸುವ ಕಾಯಕವನ್ನು ಯಕ್ಷಗಾನ ಶತಮಾನಗಳಿಂದ ಮಾಡುತ್ತಾ ಬಂದಿದೆ. ಕರಾವಳಿ ಜಿಲ್ಲೆ ಹಾಗೂ ಮಳೆನಾಡಿನಲ್ಲಿ ಒಂದು ಕಾಲದಲ್ಲಿ ಬಹುತೇಕ ಅನಕ್ಷರಸ್ಥರೇ ಆಗಿದ್ದ ಜನರನ್ನು ಸಾಂಸ್ಕೃತಿಕವಾಗಿ ಸಂಪನ್ನರಾಗಿಸುವಲ್ಲಿ ಯಕ್ಷಗಾನದ ಪಾತ್ರ ಮಹತ್ತ್ವದ್ದು. ನಾಲ್ಕು ಕಂಬಗಳ ಮಧ್ಯೆ ವೈಭವೀಕೃತಗೊಂಡು ಪ್ರೇಕ್ಷಕರನ್ನು ಲೋಕಾಂತರ ವಿಹಾರಕ್ಕೊಯ್ಯಬಲ್ಲ ಯಕ್ಷಗಾನದಲ್ಲಿ ಕಲಾವಿದರ ಪಾತ್ರವೂ ಬಹಳ ಮಹತ್ವದ್ದಾಗಿದೆ.

ಯಕ್ಷಗಾನ ಕಲೆಯು ಕೇವಲ ಪುರಾಣ ಪ್ರಪಂಚಕ್ಕೇ ಮೀಸಲು ಎಂಬ ಮಾತುಗಳು ಕೇಳಿ ಬರುತ್ತಿದ್ದುದು ಸಾಮಾನ್ಯ. ಆದರೆ ಯಕ್ಷಗಾನ ಕ್ಷೇತ್ರದಲ್ಲಿ ಅನೇಕ ಪ್ರಯೋಗ ಸಾಧ್ಯತೆಗಳನ್ನು ಶೋಧಿಸುವ ಕಾರ್ಯ ನಡೆದಿರುವುದನ್ನು ನಾವು ಅಲ್ಲಗಳೆಯುವಂತಿಲ್ಲ. ಯಕ್ಷಗಾನದಲ್ಲಿ ಸಾಂಪ್ರದಾಯಿಕತೆಯ ಚೌಕಟ್ಟಿನೊಂದಿಗೆ ಪ್ರಯೋಗಶೀಲತೆಯೂ ಬೆಳೆದು ಬಂದಿರುವುದನ್ನು ಕಾಣಬಹುದಾಗಿದೆ. 'ಕರಾವಳಿ ಕರ್ನಾಟಕವಲ್ಲದೆ ರಾಜ್ಯದ ಇತರೆಡೆ ಕೂಡಾ ಸಾಕಷ್ಟು ವರ್ಷಗಳ ಹಿಂದೆಯೇ ರಚಿತವಾಗಿದ್ದ ದೊಡ್ಡ ಸಂಖ್ಯೆಯ ಪುರಾಣೇತರ ವಸ್ತುಗಳುಳ್ಳ ಪ್ರಸಂಗಳನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ' ಎಂದು ಅಮೃತ ಸೋಮೇಶ್ವರರು ಹೇಳುತ್ತಾರೆ.

**ಸಾಮಾಜಿಕ ಜಾಗೃತಿಯಲ್ಲಿ ಯಕ್ಷಗಾನದ ಪಾತ್ರ**

ಚಲನಶೀಲತೆಯಿರುವ ಯಾವುದೇ ಕಲೆಯು ಕೂಡ ವರ್ತಮಾನ ಮತ್ತು ಭವಿಷ್ಯತ್ ಕಾಲಕ್ಕೆ ಹೊಂದಿಕೊಳ್ಳದೆ ಕೇವಲ ಭೂತಕಾಲದ ಬಗ್ಗೆ ಮಾತ್ರ ಅರಿವು ಹುಟ್ಟಿಸುವ ಪ್ರಯತ್ನ ಮಾಡುವುದಿಲ್ಲ. ಯಕ್ಷಗಾನವು ಧರ್ಮ ಪ್ರಚೋದನಾತ್ಮಕ ಕಲೆಯಾಗಿದೆ. ಅಂದರೆ ಇಲ್ಲಿ ಧರ್ಮವೆಂದರೆ ಕಾಲೋಚಿತ ಕರ್ತವ್ಯವಾಗುತ್ತದೆ ಎಂದು ಹಿರಿಯರು ಹೇಳುತ್ತಾರೆ. ಆಯಾ ಕಾಲದ ಅಥವಾ ಪ್ರಸ್ತುತ ಕಾಲಘಟ್ಟದ ಜನತೆಯ ಜ್ವಲಂತ ಸಮಸ್ಯೆಗಳಿಗೆ ಸ್ಪಂದಿಸುವುದು ಕಲಾಧರ್ಮ ಹಾಗೂ ಕಾಲ ಧರ್ಮವೂ ಆಗುತ್ತದೆ. ಯಕ್ಷಗಾನ ಕಲೆಯು ಕೂಡಾ ಬಾಹ್ಯ ಜಗತ್ತಿನ ಆಗುಹೋಗುಗಳನ್ನು ಲೆಕ್ಕಿಸದೆ ಕೇವಲ ಹಿಂದಿನ ಸಂಪ್ರದಾಯ ಅಥವಾ ಸಿದ್ಧಾಂತಗಳನ್ನು ಪಾಲಿಸಿಕೊಂಡು ಮುನ್ನಡೆಯಲು ಸಾಧ್ಯವಿಲ್ಲ. ಯಕ್ಷಗಾನಕ್ಕೆ ಪ್ರಸ್ತುತತೆಯ ಬಗ್ಗೆಯೂ ಕಾಳಜಿ ಇರಬೇಕಾಗಿರುವುದು ಅಗತ್ಯವಾಗಿದೆ. ಯಕ್ಷಗಾನಕ್ಕೆ ಇಂತಹ ಆಯಾ ಕಾಲದ ಪ್ರಸ್ತುತತೆಗೆ ಅನುಸಾರವಾಗಿ ಸಂಪ್ರದಾಯವನ್ನು ಇಟ್ಟುಕೊಂಡು ಮುನ್ನಡೆಯುವ ಶಕ್ತಿ ಇರುವುದರಿಂದಲೇ ಈ ಕಲೆಯು ಇಂದಿಗೂ ಸಮಾಜದಲ್ಲಿ ತನ್ನದೇ ಆದ ಪ್ರಭಾವ ಬೀರುತ್ತಿರುವುದನ್ನು ನಾವು ಕಾಣಬಹುದಾಗಿದೆ.

ವರ್ತಮಾನ ಸಮಾಜವನ್ನು ಬಾಧಿಸುವ ಜ್ವಲಂತ ಸಮಸ್ಯೆಗಳಲ್ಲಿ ಕೆಲವೊಂದು ಪ್ರಮುಖ ಸಮಸ್ಯೆಗಳ ಬಗ್ಗೆಯಾದರೂ ಕಲೆಯು ಗಮನಿಸಬೇಕಾಗುತ್ತದೆ ಮತ್ತು ಅದರ ಕರ್ತವ್ಯವೂ ಆಗುತ್ತದೆ. ಉದಾಹರಣೆಗೆ ಜನಸಂಖ್ಯಾ ಸ್ಫೋಟ, ಪರಿಸರ ಮಾಲಿನ್ಯ, ಮಹಿಳಾ ದೌರ್ಜನ್ಯ, ಜಾತಿ ತಾರತಮ್ಯ, ಅನ್ಯಾಯ, ಕೃಷಿ ಸಂಬಂಧಿತ ಸಮಸ್ಯೆಗಳು, ಸಾಕ್ಷರತೆ ಹಾಗೂ ಸ್ವಚ್ಛತೆಯ ಅರಿವು, ಮಾರಕ ರೋಗಗಳ ಬಗ್ಗೆ ಅರಿವು, ಡ್ರಗ್ಸ್, ಮದ್ಯಪಾನ, ಮಾಧಕ ವ್ಯಸನಗಳ ಬಗ್ಗೆ ಜಾಗೃತಿ, ನೀರಿನ ಮಹತ್ವ ಸೇರಿದಂತೆ ಸಾಮಾಜಿಕ ಜಾಗೃತಿಯನ್ನು
ಕಾಲಕ್ಕನುಗುಣವಾಗಿ ಸಾರುವ ಮನೋಸ್ಥಿತಿ ಕಲೆಗಿರಬೇಕಾಗಿದೆ. ಒಟ್ಟಿನಲ್ಲಿ ಬದುಕಿನ ಸತ್ವವನ್ನು ಕಲೆಯು ಬೆಳಗಿದೆ ಕಲೆಯೂ ಬದುಕನ್ನು ಬೆಳೆಸುತ್ತದೆ. ಈ ನಿಟ್ಟಿನಲ್ಲಿ ಈಗಾಗಲೇ ಯಕ್ಷಗಾನ ಕಲೆಯು ಹಲವಾರು ಸಾಂಪ್ರದಾಯಿಕ ಪುರಾಣ ಪ್ರಸಂಗಗಳೊಂದಿಗೆ ಆಯಾ ಕಾಲಘಟ್ಟಕ್ಕೆ ಅನುಸಾರವಾದ ವಿಷಯಕ್ಕೆ ಪೂರಕವಾಗಿ ಪ್ರಸಂಗಗಳು ರಚನೆಗೊಂಡು ಧಾರ್ಮಿಕತೆ, ಮನೋರಂಜನೆಯೊಂದಿಗೆ ಸಾಮಾಜಿಕ, ಶೈಕ್ಷಣಿಕ ಅರಿವು, ಜಾಗೃತಿ ಮೂಡಿಸುವ ಕಾರ್ಯವನ್ನು ಮಾಡಿದೆ ಮತ್ತು ಮಾಡುತ್ತಾ ಬಂದಿದೆ. ಇದು ಈ ಯಕ್ಷಗಾನ ಕಲೆಯ ನಿರಂತರತೆಗೆ ಮತ್ತು ಕಲೆಯೊಂದು ಸಾಮಾಜಿಕ ಜವಬ್ದಾರಿಯನ್ನು ವಹಿಸಿಕೊಂಡು ಮುನ್ನಡೆಯುತ್ತಿರುವುದಕ್ಕೆ ಸಾಕ್ಷಿಯಾಗಿದೆ.
ಪ್ರಮುಖವಾಗಿ ಸಾಮಾಜಿಕವಾಗಿ ಎದುರಾಗುವ ಹಲವಾರು ಸಮಸ್ಯೆಗಳ ಬಗೆಗೆ ಯಕ್ಷಗಾನ ಕಲೆಯು ಸಮಾಜದಲ್ಲಿ ಜಾಗೃತಿ ಮೂಡಿಸುವ ಮೂಲಕ ಎಚ್ಚರಿಸುವಂತಹ ಪ್ರಯತ್ನಗಳು ಇಲ್ಲಿ ನಡೆದಿರುವುದನ್ನು ಬಹಳ ವರ್ಷಗಳ ಹಿಂದಿನಿಂದಲೇ ಕಾಣಬಹುದು. ಮುಖ್ಯವಾಗಿ ಸ್ವಚ್ಛತೆ, ಪರಿಸರ ಮಾಲಿನ್ಯ, ಕೃಷಿ ಹಾಗು ಜಲದ ಮಹತ್ವ, ಭಾಷೆ ಹಾಗೂ ಸಾಕ್ಷರತೆಯ ಅರಿವು, ನೆಲದ ಸಂಸ್ಕೃತಿಯ ಅರಿವು, ಮಹಿಳಾ ದೌರ್ಜನ್ಯ, ಪ್ರಾಕೃತಿಕ ವಿಕೋಪ, ಅರಣ್ಯ ಸಂರಕ್ಷಣೆ, ಜಾತಿ, ವರ್ಗ ಸಂಘರ್ಷದ ದುಷ್ಪರಿಣಾಮಗಳು ಸೇರಿದಂತೆ ಆರೋಗ್ಯ ಜಾಗೃತಿಗೆ ಸಂಬಂಧಿಸಿದ ಏಡ್ಸ್, ಚಿಕನ್‌ಗುನ್ಯ, ಮಲೇರಿಯಾ, ಕ್ಯಾನ್ಸರ್ ಮುಂತಾದ ಮಾರಕ ರೋಗಗಳ ವಿರುದ್ದ ಆಯಾ ಕಾಲಕ್ಕನುಸಾರವಾಗಿ ಯಕ್ಷಗಾನದ ಮೂಲಕ ಜಾಗೃತಿ ಮೂಡಿಸುವ ಕಾರ್ಯವು ಯಕ್ಷಗಾನದ ಮೂಲಕ ಪರಿಣಾಮಕಾರಿಯಾಗಿ ನಡೆದಿದೆ. ಅಲ್ಲದೆ 2019-20ರಲ್ಲಿ ಕೊರೊನ ಎಂಬ ಮಹಾರೋಗ ಇಡೀ ಜಗತ್ತಿಗೇ ಬಾಧಿಸಿರುವ ಈ ಸಮಯದಲ್ಲಿಯೂ ಈ ರೋಗದ ಬಗ್ಗೆ ಜಾಗೃತಿ ಮೂಡಿಸುವ ಪ್ರಯತ್ನಗಳು ಯಕ್ಷಗಾನ ಕಲೆಯ ಮೂಲಕ ನಡೆದಿರುವುದು ಜಾಗತಿಕ ಮಟ್ಟದಲ್ಲಿ ಪ್ರಶಂಸೆಗೆ ಕಾರಣವಾಗಿದೆ.

**ಸಾಮಾಜಿಕ ಜಾಗೃತಿಗಾಗಿ ರಚನೆಯಾಗಿರುವ ಯಕ್ಷಗಾನ ಪ್ರಸಂಗಗಳು:**
ಸಾಮಾಜಿಕ ಜಾಗೃತಿಯನ್ನು ಮೂಡಿಸಲು ರಚನೆಯಾದ ಕಾಲ್ಪನಿಕ ಪ್ರಸಂಗಗಳ ಪೈಕಿ ಕೆಲವು ಪ್ರಸಂಗಗಳು, ಬರೆದಿರುವವರು ಹಾಗೂ ಪ್ರಸಂಗದ ರಚನೆಯ ಉದ್ದೇಶದ ಕುರಿತು ಇಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

**ಕೃಷಿ ವಿಜಯ:** ದಿ.ವಿ.ರಾಮರಾವ್, ಸಿದ್ದಯ್ಯ ಕೋಡಿ ಅವರು 1960ರ ದಶಕದಲ್ಲಿ ಬರೆದಿರುವ ಪ್ರಸಂಗ ಕೃಷಿ ವಿಜಯ. ಕೃಷಿಗೆ ಬರುವ ರೋಗಗಳಿಂದ ಜಿಗುಪ್ಸೆಗೊಂಡು ರೈತನಿಗೆ ಗ್ರಾಮ ಸೇವಕನು ಆತ್ಮ ವಿಶ್ವಾಸ ತುಂಬಿ ಅವನು ಕೃಷಿಯಲ್ಲಿ ಯಶಸ್ಸು ಸಾಧಿಸುವಂತೆ ಮಾಡುವ ಕಥೆ ಈ ಪ್ರಸಂಗದಲ್ಲಿದೆ. ಇಲ್ಲಿ ರೋಗ, ಕ್ರಿಮಿ ಕೀಟಗಳನ್ನು ರಾಕ್ಷಸರನ್ನಾಗಿ ಮಾಡಲಾಗಿದ್ದು, ಬಳಿಕ ಇವುಗಳ ನಾಶವಾಗಿ ಕೃಷಿ ಭಾಧೆಯಿಂದ ರೈತ ಹಸನುಗೊಳ್ಳುತ್ತಾನೆ ಇದು ಈ ಪ್ರಸಂಗದ ಸಾರಾಂಶವಾಗಿದೆ.

**ನೀರಿನ ಪ್ರಸಂಗ:** ರಂಗಕರ್ಮಿ ಶ್ರೀ ಗೋಪಾಲಕೃಷ್ಣ ನಾಯರಿಯರ ನೀರಿನ ಪಸ್ರಂಗವನ್ನು ಬರೆದಿದ್ದಾರೆ. ಈ ಪ್ರಸಂಗದ ಮೊದಲ ಪ್ರಯೋಗವು 2003ರಲ್ಲಿ ಬೆಂಗಳೂರಿನ ರಂಗಮಂದಿರದಲ್ಲಿ ನಡೆದಿದೆ. ನಂತರ ಯಕ್ಷದೇಗುಲ ತಂಡದವರು ಈ ಪ್ರಸಂಗವನ್ನು ಬೇರೆ ಬೇರೆ ಕಡೆ ನಡೆಸಿದ್ದಾರೆ. ಈ ಪ್ರಸಂಗದಲ್ಲಿ ಮೇಲ್ನೋಟಕ್ಕೆ ನೀರಿನ ಮಹತ್ವವನ್ನು ಸಾರುವ ಕಥೆಯನ್ನಾಧರಿಸಿದೆ.

**ಮದಿರಾಸುರ ಮರ್ದನ:** 2003 ರಲ್ಲಿ ಅಮೃತ ಸೋಮೇಶ್ವರ ಅವರು ಈ ಮದಿರಾಸುವ ಮರ್ದನ ಎಂಬ ಪ್ರಸಂಗವನ್ನು ಬರೆದಿದ್ದಾರೆ. ಕುಡಿತದ ಚಟದ ಬಗ್ಗೆ ಸಮಾಜದಲ್ಲಿ ಅರಿವು, ಜಾಗೃತಿ ಮೂಡಿಸುವ ಉದ್ದೇಶದಿಂದ ಈ ಪ್ರಸಂಗವನ್ನು ಬರೆದಿದ್ದು, ನಮ್ಮ ರಾಜ್ಯದ ಬೇರೆ ಬೇರೆ ಕಡೆ ಪ್ರಸಂಗದ ಪ್ರದರ್ಶನ ನಡೆದಿದೆ.

**ಸಾಕ್ಷರತಾ ವಿಜಯ:** ಸಾಕ್ಷರತಾ ವಿಜಯ ಪ್ರಸಂಗವು ಡಾ.ಚಂದ್ರಶೇಖರ ದಾಮ್ಲೆ ಅವರ ಪ್ರಸಂಗವಾಗಿದೆ. ಪಿಲಿಗುಳಿ ಗೋವಿಂದ ಭಟ್ ಮತ್ತು ಗಂಗಾರಾಂ ಪೆರಾಜೆಯವರ ಕಥಾ ಕಲ್ಪನೆಯಾಗಿದ್ದು, 1990 ರಲ್ಲಿ ಇದು ಪ್ರಕಟವಾಗಿದೆ. 1990 ದಶಕದಲ್ಲಿ ನಡೆಯುತ್ತಿದ್ದ ಸಾಕ್ಷರತಾ ಆಂದೋಲನಗಳ ಪೈಕಿ ಇದು ಹಲವಾರು ಕಡೆ ಪ್ರದರ್ಶನಗೊಂಡು ಜನರಲ್ಲಿ ಶೈಕ್ಷಣಿಕ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಗಿದೆ.

**ರುಧಿರ ಮೋಹಿನಿ :** ಪ್ರೊ.ಅಮೃತ ಸೋಮೇಶ್ವರ ಅವರು ಏಡ್ಸ್ ಕುರಿತ ಜಾಗೃತಿಗಾಗಿ ರುಧಿರ ಮೋಹಿನಿ ಎಂಬ ಪ್ರಸಂಗವನ್ನು ಬರೆದಿದ್ದಾರೆ. ಈ ಪ್ರಸಂಗವು 2014ರಲ್ಲಿ ಪ್ರಕಟಗೊಂಡಿದ್ದು, ಅದಕ್ಕಿಂತ ಮುನ್ನವೇ ಈ ಪ್ರಸಂಗವು ಜಿಲ್ಲೆಯ ಹಲವಾರು ಕಡೆ ಏಡ್ಸ್ ಜಾಗೃತಿ ಮೂಡಿಸುವ ಅಂಗವಾಗಿ ಹಲವಾರು ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ನಡೆದಿದೆ.

**ಗೋವಾ ದುರಂತ:** ಡಾ.ಎನ್.ಶಿಮಂತೂರು ನಾರಾಯಣ ಶೆಟ್ಟಿಅವರು 1940-61 ರ ನಡುವೆ ನಡೆದ ಗೋವಾ ವಿಮೋಚನಾ ಚಳುವಳಿಯ ಒಂದು ಘಟನೆಯ ಬಗ್ಗೆ ಜನಸಾಮಾನ್ಯರಲ್ಲಿ ರಾಷ್ಟ್ರೀಯ ಭಾವನೆಯನ್ನು ಉದ್ದೀಪಿಸುವುದಕ್ಕಾಗಿ ಈ ಗೋವಾ ದುರಂತ ಎಂಬ ಯಕ್ಷಗಾನ ಪ್ರಸಂಗವನ್ನು ಬರೆದಿದ್ದಾರೆ. 1955ರಲ್ಲಿ ಇದನ್ನು ಬರೆದಿದ್ದರು. 1958ರಲ್ಲಿ ಕಿನ್ನಿಗೋಳಿಯಲ್ಲಿ ನಡೆದ ರೈತ ಮುಂದಾಳುಗಳ ಸಭೆಯಲ್ಲಿ ಇದು ಪ್ರದರ್ಶನಗೊಂಡಿದೆ.

**ಸಹನಾ ಸಂದೇಶ :** ಸಹನಾ ಸಂದೇಶ ಎಂಬುದು ಪ್ರೊ.ಅಮೃತ ಸೋಮೇಶ್ವರರು ಬರೆದ ಪ್ರಸಂಗವಾಗಿದೆ. ಜಗತ್ತಿನ ಸದ್ಗುಣ, ದುರ್ಗುಣಗಳೇ ಈ ಪ್ರಸಂಗದಲ್ಲಿ ಪಾತ್ರಗಳಾಗಿ ಕಾಣಿಸಿಕೊಳ್ಳುತ್ತವೆ. ದುರ್ಗುಣಗಳ ಎದುರು ಅಂತಿಮವಾಗಿ ಸದ್ಗುಣಗಳಿಗೇ ಜಯವಾಗುತ್ತದೆ ಎಂಬುದು ಈ ಪ್ರಸಂಗದ ಉದ್ದೇಶವಾಗಿದ್ದು, ಧರ್ಮ ಬೋಧನೆಯೊಂದಿಗೆ ಸಾಮಾಜಿಕ ಜಾಗೃತಿ ಮೂಡಿಸುವ ಭಾಗವಾಗಿ ಹಲವು ಕಡೆ ಇದು ಪ್ರದರ್ಶನಗೊಂಡಿದೆ.

**ಕೃಷಿ ವಿಜಯ:** ಸುಳ್ಯದ ಎಂ.ಟಿ. ಶಾಂತಿ ಮೂಲೆಯವರು ಈ ಪ್ರಸಂಗವನ್ನು ಬರೆದಿದ್ದಾರೆ. ಬದಲಾಗಿರುವ ಕೃಷಿ ಪದ್ಧತಿ, ಬದಲಾದ ದೃಷ್ಟಿಕೋನಗಳು ಹಾಗೂ ಹಸಿರುಕ್ರಾಂತಿಯ ದುಷ್ಪರಿಣಾಮಗಳ ಬಗೆಯನ್ನು ಈ ಯಕ್ಷಗಾನ ಪ್ರಸಂಗದಲ್ಲಿ ತಿಳಿಸಲಾಗಿದೆ. ಅಧಿಕ ಉತ್ಪಾದನೆಯ ಒತ್ತಡಕ್ಕೆ ಸಿಲುಕಿ ಕೃಷಿಯೂ ಕೈಗಾರಿಕೆಯಾಗಿ ಬದಲಾದ ಪರಿಣಾಮಗಳನ್ನು ಈ ಪ್ರಸಂಗವು ತಿಳಿಸಿ ಕೃಷಿಯ ಮಹತ್ವವನ್ನು ಸಾರುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ.

**ಅಕ್ಷರ ಕುಮಾರ ವಿಜಯ:** ಜಾನಪದ ಸಂಶೋಧಕ ಡಾ.ಪಾಲ್ತಾಡಿ ರಾಮಕೃಷ್ಣ ಆಚಾರ್‌ರವರು ಅಕ್ಷರ ಕುಮಾರ ವಿಜಯ ಪ್ರಸಂಗವನ್ನು ಬರೆದಿದ್ದಾರೆ. ಈ ಸಾಕ್ಷರತೆಯ ಆಂದೋಲನದ ಸಮಯದಲ್ಲಿ, 1990ರಲ್ಲಿ ಈ ಪ್ರಸಂಗವನ್ನು ಬರೆದಿದ್ದು, ಈ ಸಂದರ್ಭದಲ್ಲಿ ಹಲವಾರು ಕಡೆಗಳಲ್ಲಿ ಪ್ರದರ್ಶನಗಳನ್ನು ಕಂಡಿದೆ.

**ಅಕ್ಷರ ವಿಜಯ:** ಚಿಪ್ಪಾರು ಗುರುರಂಗಯ್ಯ ಬಲ್ಲಾಳರ ಪ್ರಸಂಗವಾಗಿದೆ. ಕಾಸರಗೋಡಿನಲ್ಲಿ ಸಾಕ್ಷರತಾ ಪ್ರಚಾರಕ್ಕಾಗಿ ಬರೆದ ಪ್ರಸಂಗವಾಗಿದ್ದು ಬಳಿಕ ಹಲವು ಬದಲಾವಣೆಗಳೊಂದಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಪ್ರದರ್ಶನಗೊಂಡಿದೆ.

**ಶೀಲ ಸಂಕ್ರಾಂತಿ :** ದಿವಾಕರ ಹೆಗಡೆಯವರು ಶೀಲ ಸಂಕ್ರಾಂತಿ ಎಂಬ ಪ್ರಸಂಗವನ್ನು ಬರೆದಿದ್ದಾರೆ. 1997ರಲ್ಲಿ ರಚನೆಗೊಂಡ ಈ ಪ್ರಸಂಗವು ಏಡ್ಸ್ ರೋಗದ ಬಗ್ಗೆ ಜಾಗೃತಿ ಮೂಡಿಸುವ ಅಂಗವಾಗಿ ಬರೆಯಲಾಗಿದೆ. ಆರೋಗ್ಯ ಜಾಗೃತಿಯೊಂದಿಗೆ ಮೂಡಿಬಂದಿರುವ ಈ ಪ್ರಸಂಗವು ಜಿಲ್ಲೆ ನಾನಾ ಕಡೆಗಳಲ್ಲಿ ಪ್ರದರ್ಶನಗಳನ್ನು ಕಂಡು ಯಶಸ್ವಿಯಾಗಿದೆ.

**ಬರವುದ ಮಹಿಮೆ :** ದಿ.ಅನಂತರಾಮ ರಾಮ ಬಂಗಾಡಿಯವರ ಬರವುದ ಮಹಿಮೆ ಪ್ರಸಂಗವು 1990ರಲ್ಲಿ ರಚನೆಗೊಂಡಿದೆ. ಸಂಪೂರ್ಣ ಸಾಕ್ಷರತಾ ಆಂದೋಲನಕ್ಕಾಗಿಯೇ ಈ ಬರವುದ ಮಹಿಮೆ ಪ್ರಸಂಗ ರಚಿಸಲ್ಪಟ್ಟಿದೆ. ತುಳುವಿನಲ್ಲಿಯೇ ಈ ಪ್ರಸಂಗವು ಪ್ರದರ್ಶನಗೊಂಡಿದೆ. ಕೋಟೆಕಾರಿನ ಕಲಾಗಂಗೋತ್ರಿ ನೇತೃತ್ವದಲ್ಲಿ ಜಿಲ್ಲೆಯ ನಾನಾ ಕಡೆ ಯಕ್ಷಗಾನ ಪ್ರದರ್ಶನ ನಡೆದಿದೆ.

**ಇಳೆಯಣ್ಣನ ಕಥೆ :** ರಂಗಕರ್ಮಿ ಗೋಪಾಲಕೃಷ್ಣ ನಾಯರಿಯವರು ಇಳೆಯಣ್ಣನ ಕಥೆ ಪ್ರಸಂಗವನ್ನು ಬರೆದಿದ್ದಾರೆ. 1990 ರಲ್ಲಿ ರಚನೆಗೊಂಡ ಇದು ಸಾಕ್ಷರತಾ ಸಂದೇಶದ ಪ್ರಸಾರ, ಏಡ್ಸ್ ಜಾಗೃತಿಗಾಗಿ ರಚನೆಯಾದದ್ದಾರೂ ಬಳಿಕ ಪೋಲೀಯೋ, ಜನಸಂಖ್ಯಾ ನಿಯಂತ್ರಣ, ಹೆಣ್ಣು ಭ್ರೂಣ ಹತ್ಯೆ ಮೊದಲಾದ ವಿಷಯಗಳ ಬಗ್ಗೆ ಜಾಗೃತಿಯ ಸಲುವಾಗಿ ಪ್ರದರ್ಶನಗೊಂಡಿದೆ.
ರಾಜ್ಯದ ಹಲವಾರು ಕಡೆ ಇದು ಪ್ರದರ್ಶನಗಳನ್ನು ಕಂಡಿದೆ.

**ಪಲಾಂಡು ಚರಿತೆ :** ಇದು ಮಂಗಳೂರಿನಲ್ಲಿ 1850–1928ರ ಕಾಲಘಟ್ಟದಲ್ಲಿ ವಾಸವಾಗಿದ್ದ ಕೆರೋಡಿ ಸುಬ್ಬರಾಯರ ಪ್ರಸಂಗ. ಇದು ಈರುಳ್ಳಿಯ ಕಥೆಯಾಗಿದ್ದು, ನೀರುಳ್ಳಿ ಮತ್ತು ತಂಬಾಕಿನ ನಡುವೆ ನಡೆಯುವ ಸಂಭಾಷಣೆಯಲ್ಲಿ ಹಾಸ್ಯ ಹಾಗೂ ವಿಡಂಭನೆ ಎರಡೂ ಇದೆ. ಈ ಪ್ರಸಂಗವು ಮತ್ತೆ ನೂರು ವರ್ಷದ ಬಳಿಕ ಸಿರಿಬಾಗಿಲು ವೆಂಕಪಯ್ಯ ಪ್ರತಿಷ್ಠಾನದ ಮೂಲಕ ಪ್ರದರ್ಶನವನ್ನು ಕಂಡು ಮೆಚ್ಚುಗೆಗೆ ಪಾತ್ರವಾಗಿದೆ.

**ವೃಕ್ಷ ರಕ್ಷಣಾ/ ಮಾರಿಷಾ ಕಲ್ಯಾಣ :** ಪ್ರೊ.ಅಮೃತ ಸೋಮೇಶ್ವರ ಅವರು ಬರೆದಿರುವ ಮಾರಿಷಾ ಕಲ್ಯಾಣ ಪ್ರಸಂಗವು ಭಾರೀ ಪ್ರಸಿದ್ಧಿಯನ್ನು ಪಡೆದಿದೆ. ಔಷಧೀಯ ಗಿಡಗಳ ಸಂರಕ್ಷಣೆಯ ಕುರಿತು ಜನರಿಗೆ ತಿಳುವಳಿಕೆ ನೀಡುವ ಉದ್ದೇಶದಿಂದ ಅರಣ್ಯ ಇಲಾಖೆಯ ಕೋರಿಕೆಯ ಮೇರೆಗೆ 1990ರಲ್ಲಿ ಬರೆದ ಪ್ರಸಂಗವಾಗಿದೆ.

**ಕಾಶ್ಮೀರ ಕಾಳಗ :** 1965ರಲ್ಲಿ ವಳಕ್ಕುಂಜ ನರಸಿಂಹ ಭಟ್ಟರು ಕಾಶ್ಮೀರ ಕಾಳಗ ಪ್ರಸಂಗವನ್ನು ಬರೆದಿದ್ದಾರೆ.
1956 ರಲ್ಲಿ ನಡೆದ ಭಾರತ –ಪಾಕಿಸ್ತಾನ ಯುದ್ದದ ಹಿಂದು ಮುಂದಿನ ಸನ್ನಿವೇಶಗಳು ಈ ಪ್ರಸಂಗದಲ್ಲಿದೆ.

**ಅಕ್ಷರ ವಿಮೋಚನೆ:** ರಾಮಚಂದ್ರ ಉಚ್ಚಿಲ ಹಾಗೂ ವಿದ್ವಾನ್ ವೆಂಕಟರಾಜ ಪುಣಿಂಚಿತ್ತಾಯರ ಪ್ರಸಂಗವಾಗಿದೆ. ಕಥೆ ಪಕೀರ್ ಮಹಮ್ಮದ್ ಕಟ್ಪಾಡಿಯವರದ್ದು. 1990ರಲ್ಲಿ ಸಂಪೂರ್ಣ ಸಾಕ್ಷರತಾ ಆಂದೋಲನದ ಭಾಗವಾಗಿ ಬಂದ ಪ್ರಸಂಗವಾಗಿದೆ. ಇದು ಜಿಲ್ಲೆಯ ಹಲವೆಡೆ ಪ್ರಸಂಗಗೊಂಡಿದೆ.

**ನಿಸರ್ಗ ಸಂಧಾನ :** ದಿ.ಹೊಸ್ತೋಟ ಮಂಜುನಾಥ ಭಾಗವತರು ಈ ನಿಸರ್ಗ ಸಂಧಾನ ಎಂಬ ಪ್ರಸಂಗವನ್ನು 1986ರಲ್ಲಿ ಬರೆದಿದ್ದಾರೆ. ಪರಿಸರ ಸಂರಕ್ಷಣೆ ಆಂದೋಲನದ ಭಾಗವಾಗಿ ಈ ಪ್ರಸಂಗವು ರಚನೆಯಾಗಿದೆ. ಇದು ಬೇರೆ ಬೇರೆ ರಾಜ್ಯ ಗಳಲ್ಲಿಯೂ ಪ್ರದರ್ಶನ ಕಂಡಿದೆ.

**ರಾತ್ರಿ ಶಾಲೆ :** ಕೃಷಿಕರಾಗಿದ್ದ ದಿ. ಯು. ಗೋವಿಂದ ಭಟ್ಟರ ಪ್ರಸಂಗ. 1960ರ ದಶಕದ ಕೊನೆಯಲ್ಲಿ ರಚನೆಯಾದ ಪ್ರಸಂಗ ಇದು. ಗೋವಿಂದ ಭಟ್ಟರು ಸ್ವತಃ ರಾತ್ರಿ ಶಾಲೆಯನ್ನು ನಡೆಸಿದ್ದರಂತೆ. ಇದು ಸಾಕ್ಷರತೆಗೆ ಸಂಬಂಧಿಸಿದ ಪ್ರಸಂಗವಾಗಿದೆ. ಸಾಕ್ಷರತಾ ಆಂದೋಲನ ಸಮಾಜದಲ್ಲಿ ದೊಡ್ಡ ಅಭಿಯಾನವಾಗಿ ಆರಂಭವಾಗುವ ಮೊದಲೇ ಈ ಪ್ರಸಂಗ ಬಂದಿರುವುದು ಗಮನಾರ್ಹ. ರಾತ್ರಿ ಶಾಲೆಯಿಂದ ಹಳ್ಳಿಯ ಅನಕ್ಷರಸ್ಥರು ವಿದ್ಯೆಯನ್ನು ಪಡೆದ ನಂತರ ಕೋಳಿ ಅಂಕ, ಜುಗಾರಿ ಇತ್ಯಾದಿಗಳನ್ನು ಬಿಟ್ಟು ಊರಿಗೆ ಅಭಿವೃದ್ಧಿಗೆ ಶ್ರಮಿಸುವ ಕಥಾ ಹಂದರ ಇಲ್ಲಿದೆ.

**ಒಕ್ಕಲು ಮಸೂದೆ;** ಹೋಮಿಯೋಪತಿ ವೈದ್ಯರೂ ಕೃಷಿಕರೂ ಆಗಿದ್ದ ದಿ.ಅಂಬೇಮೂಲೆ ಗೋವಿಂದ ಭಟ್ಟರು ಬರದಿರುವ ಪ್ರಸಂಗ ಪ್ರಸಂಗ ಇದಾಗಿದೆ. 1975ರಲ್ಲಿ ಇದು ರಚನೆಯಾಗಿದೆ. ಇದು ಭೂಮಸೂದೆಗೆ ಸಂಬಂಧಿಸಿದ ಕಥೆಯಾಗಿದೆ. ಜಮೀನ್ದಾರರು ಒಕ್ಕಲುಗಳ ನಡುವಿನ ತಿಕ್ಕಾಟಗಳ ವಿವರಣೆ ಇದೆ. ಭೂ ಸುದಾರಣೆಗೆ ಇದ್ದ ಅಡೆತಡೆಗಳ ನಿವಾರಣೆಯ, ಹೊಸ ಕಾನೂನಿಗೆ ಒಗ್ಗದವರನ್ನು ಮನವೊಳಿಸುವ ಉದ್ದೇಶ ಈ ಪ್ರಸಂಗದಲ್ಲಿ ಎದ್ದುಕಾಣುತ್ತದೆ.

**ಮಧುಪ ಮಹಾತ್ಮೆ :** 1980 ರಲ್ಲಿ ಹರಿಕೃಷ್ಣ ಭಟ್ಟ ಆರ್ತ್ಯಡ್ಕ ಅವರು ಈ ಮಧುಪ ಮಹಾತ್ಮೆ ಎಂಬ ಪ್ರಸಂಗವನ್ನು ಬರೆದಿದ್ದಾರೆ. ಇದು ಜೇನು ಕೃಷಿ, ಜೇನಿನ ಮಹತ್ವ ಮತ್ತು ಜೇನ್ನೊಣಗಳ ರಕ್ಷಣೆಗೆ ಸಂಬಂಧಿಸಿದ ಪ್ರಸಂಗವಾಗಿದೆ.

**ಚಿಕ್ಕ ಬೊಕ್ಕರ ಕಾಳಗ :** ಯಕ್ಷಗಾನ ಗುರುಗಳಾದ ಉಪ್ಪಳಕೃಷ್ಣ ಮಾಸ್ತರ್ ಅವರು ಬರೆದ ಪ್ರಸಂಗವಾಗಿದೆ. 1962ರಲ್ಲಿ ಮುದ್ರಣಗೊಂಡಿದೆ. ಸಮಾಜವು ಹೇಗಿರಬೇಕು ಹಾಗೂ ಸಮಾಜದಲ್ಲಿ ಸಂಘರ್ಷವಿಲ್ಲದೆ ಸಾಮರಸ್ಯ, ಸ್ನೇಹದಿಂದ ಬದುಕಬೇಕೆಂಬ ಆಶಯವನ್ನು ಈ ಪ್ರಸಂಗದಲ್ಲಿ ಚಿತ್ರಿಸಲಾಗಿದೆ.

**ಒಂದು ನೀರ ಪ್ರಸಂಗ :** ರಂಗಕರ್ಮಿ ಗೋಪಾಲಕೃಷ್ಣ ನಾಯರಿಯವರು ಬರೆದ ಪ್ರಸಂಗ ಇದಾಗಿದೆ. ಈ ಪ್ರಸಂಗವು ನೀರಿನ ಮಹತ್ವವನ್ನು ಸಾರುವ ಪ್ರಸಂಗವಾಗಿ ಮೇಲ್ನೋಟಕ್ಕೆ ಕಂಡರೂ ಇದರೊಳಗೆ, ಜಾತಿ ಸಂಘರ್ಷ, ಸಾಮಾಜಿಕ ತಾರತಮ್ಯ ಭಾವನೆಗಳ ವಿಚಾರಗಳು ಕೂಡಾ ಈ ಪ್ರಸಂಗದಲ್ಲಿ ಬರುತ್ತದೆ. ಈ ಯಕ್ಷಗಾನ ಪ್ರಸಂಗವನ್ನು 2003ರಲ್ಲಿ ಬೆಂಗಳೂರಿನ ಎಡಿಎ ರಂಗಮಂದಿರದಲ್ಲಿ ಪ್ರದರ್ಶನ ಕಂಡಿದೆ.

**ಅರಣ್ಯ ಸಂರಕ್ಷಣೆ :** ಅರಣ್ಯ ಸಂರಕ್ಷಣೆ ಎಂಬ ಪ್ರಸಂಗವನ್ನು

ಕೆ.ವಿಶ್ವವಿನೋದ ಬನಾರಿಯವರು ಬರೆದಿದ್ದಾರೆ. ಚಂದ್ರಶೇಖರನೆಂಬ ಪರಿಸರ ಪ್ರೇಮಿ ಜನರಿಗೆ ಪ್ರೇರಣೆ ನೀಡುವುದರೊಂದಿಗೆ ಅವರನ್ನು ಅರಣ್ಯ ಸಂರಕ್ಷಣೆಯ ಅಭಿಯಾನದಲ್ಲಿ ತೊಡಗಿಸಿಕೊಳ್ಳುವ ವಿಷಯ ಈ ಪ್ರಸಂಗದಲ್ಲಿದೆ.ಅರಣ್ಯದ ಮಹತ್ವ, ಪರಿಸರ ಸಂರಕ್ಷಣೆಯ ವಿಷಯದಲ್ಲಿ ಈ ಯಕ್ಷಗಾನ ಪ್ರಸಂಗ ಹೆಚ್ಚಿನ ಮಹತ್ವ ಪಡೆದುಕೊಂಡಿದೆ.

**ಘೋರ ಮಾರಕ** : ಅಮೃತ ಸೋಮೇಶ್ವರ ಅವರು ಬರೆದ ಪ್ರಸಂಗವಾಗಿದ್ದು, 1994ರಲ್ಲಿ ಮುದ್ರಣಗೊಂಡಿದೆ. ಈ ಪ್ರಸಂಗವು ದೇಶದಲ್ಲಿ ಏಡ್ಸ್ ಕಾಯಿಲೆಯಿಂದ ಜನರು ಬಹಳಷ್ಟು ಸಂಕಷ್ಟವನ್ನು ಎದುರಿಸಿದ್ದರು. ಈ ಸಂದರ್ಭದಲ್ಲಿ ಈ ಮಾರಕ ಕಾಯಿಲೆಯ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯವನ್ನು ಈ ಯಕ್ಷಗಾನ ಪ್ರಸಂಗವು ಮಾಡಿದೆ.

**ಬಿಲ್ಲ ಹಬ್ಬ:** ಪಳ್ಳತಡ್ಕ ನರಸಿಂಹ ಭಟ್ಟರು ಬರೆದ ಪ್ರಸಂಗವಾಗಿದೆ. 1953ರಲ್ಲಿ ಇದು ಮುದ್ರಣಗೊಂಡಿದೆ.ಇದು ಒಂದು ಮಸೂದೆ ಅಥವಾ ಶಾಸನಕ್ಕೆ ಸಂಬಂಧಿಸಿದ ಪ್ರಸಂಗವಾಗಿದೆ. ಆಗಿನ ಮದ್ರಾಸ್ ಸರ್ಕಾರ 1937ರಲ್ಲಿ ಋಣಪರಿಹಾರ ಶಾಸನವೊಂದನ್ನು ಜಾರಿಗೆ ತಂದಿತು. ರೈತರು ಕಟ್ಟಲಾಗದೆ ಉಳಿಸಿಕೊಂಡಿದ್ದ ಸಾಲಗಳ ಬಡ್ಡಿ ಮನ್ನಾ ಮಾಡುವ ಉದ್ದೇಶದ ಕಾನೂನಾಗಿತ್ತು.ಆಗ ಶ್ರೀಮಂತರು ಇದಕ್ಕೆ ವಿರೋದ ವ್ಯಕ್ತಪಡಿಸಿ ಪ್ರತಿಭಟಿಸಿದ್ದರು. ಗ್ರಾಮೀಣ ಜನರ ಬದುಕಿನ ಬಗ್ಗೆ ಈ ಪ್ರಸಂಗ ವಿವರಿಸುತ್ತದೆ.

**ಕಾನೂನಿನರಿವು** : ಇದು ದಿ.ಹೊಸ್ತೋಟ ಮಂಜುನಾಥ ಭಾಗವತರ ಪ್ರಸಂಗವಾಗಿದೆ. ಪತಿಯಿಂದ ದೌರ್ಜನ್ಯಕ್ಕೊಳಗಾದ ಮಹಿಳೆಯೊಬ್ಬಳು ನ್ಯಾಯಾಲಯದ ಸಹಾಯದಿಂದ ವಿಚ್ಛೇದನ ಪಡೆದುಕೊಳ್ಳುವ ಕಥೆ ಇದರಲ್ಲಿದೆ. ಗಂಡನಿಂದ ಬಾಳು ಹಾಳಾಯಿತು ಎಂದು ಯೋಚಿಸಿದ ಮಹಿಳೆ ತನ್ನ ಮಗುವಿನೊಂದಿಗೆ ತವರಿಗೆ ಮರಳುತ್ತಾಳೆ. ತಂದೆ ಆಕೆಯನ್ನು ವಕೀಲರಲ್ಲಿಗೆ ಕರೆದೊಯ್ಯುತ್ತಾನೆ. ಮುಂದೆ ಜನತಾ ನ್ಯಾಯಾಲಯದ ಮುಂದೆ ವಾದ ಪ್ರತಿವಾದಗಳು ಪ್ರಸಂಗದಲ್ಲಿ ಕಂಡು ಬರುತ್ತದೆ. ಅಂತಿಮವಾಗಿ ಮಹಿಳೆಯ ಅಹವಾಲು ಸರಿಯಾಗಿದೆ ಎಂದು ತೀರ್ಮಾನಿಸಿ ನ್ಯಾಯಾದೀಶರು ಆಕೆಗೆ ವಿಚ್ಛೇದನಕ್ಕೆ ಅವಕಾಶ ಮಾಡಿಕೊಡುತ್ತಾರೆ.ಮಗುವನ್ನು ಆಕೆಯೊಂದಿಗೆ ಕರೆದೊಯ್ಯಲು ಅನುಮತಿ ನೀಡುತ್ತಾರೆ. ಮಹಿಳಾ ದೌರ್ಜನ್ಯ ಹಾಗು ಮಹಿಳಾ ಪರ ಅನ್ಯಾಯದ ವಿರುದ್ದ ಈ ಯಕ್ಷಗಾನವೂ ಕೂಡಾ ಜಾಗೃತಿ ಮೂಡಿಸುತ್ತದೆ ಎನ್ನುವುದಕ್ಕೆ ಈ ಪ್ರಸಂಗ ಅತ್ಯಂತ ಮಹತ್ವದ್ದಾಗಿದೆ.

**ಅರುಣ ಸಾರಥ್ಯ:** ಅರುಣ ಸಾರಥ್ಯ ಎಂಬುದು ಅಮೃತ ಸೋಮೇಶ್ವರ ಅವರು ಬರೆದ ಪ್ರಸಂಗವಾಗಿದೆ. ವಿಕಲಾಂಗ ಮಕ್ಕಳ ಸಾಧನೆಯ ಬಗ್ಗೆ ಈ ಪ್ರಸಂಗದ ಸಾರದಲ್ಲಿ ತಿಳಿಸಲಾಗಿದೆ. ಹುಟ್ಟಿನಿಂದಲೇ ಅಂಗವೈಕಲ್ಯವನ್ನು ಹೊಂದಿದ್ದ ಕಶ್ಯಪ ವಿನತೆಯರ ಮಗ ಅರುಣನು ಸ್ವ ಪ್ರಯತ್ನದಿಂದ ಸೂರ್ಯನ ಸಾರಥಿಯಾದ ಕಥೆ ಇದರಲ್ಲಿದೆ. ವಿಶೇಷ ಚೈತನ್ಯದ ಮಕ್ಕಳ ಯೋಗ ಕ್ಷೇಮವನ್ನು ನೋಡಿಕೊಳ್ಳುವ ಮಂಗಳೂರಿನ ಚೇತನ ಸಂಸ್ಥೆಗಾಗಿ ಅಮೃತ ಸೋಮೇಶ್ವರರು ಈ ಪ್ರಸಂಗವನ್ನು ರಚಿಸಿದ್ದರು.

**ಪಂಚಭೂತ ಪ್ರಪಂಚ:** ಅಂಬಾತನಯ ಮುದ್ರಾಡಿಯವರು ಬರೆದ ಪ್ರಸಂಗ ಇದಾಗಿದ್ದು 2019ರಲ್ಲಿ ಪ್ರಕಟವಾಗಿದೆ. 2019ರಲ್ಲಿ ಅತಿವೃಷ್ಟಿಯಿಂದ ಕರ್ನಾಟಕ ಕೇರಳದ ವಿವಿಧ ಬಾಗಗಳಲ್ಲಾದ ಜಲಪ್ರಳಯವನ್ನು ಕಂಡು ಈ ಪ್ರಸಂಗವನ್ನು ರಚನೆ ಮಾಡಿದ್ದಾರೆ. ಪ್ರಾಕೃತಿಕ ವಿಕೋಪಗಳಿಗೆ ನಿಸರ್ಗದ ಮೇಲೆ ಮನುಷ್ಯ ನಡೆಸುತ್ತಿರುವ ದಬ್ಬಾಳಿಕೆಯೇ ಮುಖ್ಯ ಕಾರಣವಾಗುತ್ತದೆ ಎಂಬುದು ಈ ಕಥೆಯಲ್ಲಿ ನಿರೂಪಿತವಾಗಿದೆ. ಪ್ರಥ್ವಿ, ಜಲ, ಅಗ್ನಿ, ವಾಯು, ಆಕಾಶಗಳೇ ಇಲ್ಲಿ ಪಾತ್ರಗಳಾಗಿ ಕಾಣಿಸಕೊಳ್ಳುತ್ತದೆ.

**ಸಾವಯವ ವಿಜಯ** : ಭಾಸ್ಕರ ರೈ ಕುಕ್ಕುವಳ್ಳಿ 2010ರಲ್ಲಿ ಈ ಪ್ರಸಂಗವನ್ನು ಬರೆದಿದ್ದಾರೆ. ರಾಸಾಯನಿಕ ಉತ್ಪನ್ನಗಳಿಂದ ಆಗುವ ಪ್ರಕೃತಿಯ ಮೇಲೆ ಹಾಗೂ ಮಾನವರ ಮೇಲೆ ಆಗುವ ದುಷ್ಪರಿಣಾಮವನ್ನು ಮನದಟ್ಟು ಮಾಡಿ ಸಾವಯವ ಕೃಷಿ ಹಾಗೂ ಉತ್ಪನ್ನಗಳನ್ನು ಬೆಂಬಲಿಸುವ ಕಥೆ ಇದಾಗಿದೆ. ಆಕಾಶವಾಣಿಗಾಗಿ ಬರೆದ ಅರ್ಧ ಗಂಟೆಯ ಪ್ರಸಂಗವಾಗಿದೆ. ಆ ಸಮಯದಲ್ಲಿ ಈ ಸಾವಯವ ವಿಜಯ ಯಕ್ಷಗಾನವು ಪ್ರಸಾರವಾಗಿತ್ತು.

**ನಿಸರ್ಗ ಸಂದೇಶ** : ಸಿದ್ಧಾಪುರದ ಅತ್ತಿಮುರುಡು ವಿಶ್ವೇಶ್ವರ ಹೆಗಡೆಯವರು ಈ ನಿಸರ್ಗ ಸಂದೇಶ ಎಂಬ ಪ್ರಸಂಗವನ್ನು ರಚಿಸಿದ್ದಾರೆ. ಪರಿಸರ ಸಂರಕ್ಷಣೆಯ ಕುರಿತಾಗಿ ಬರೆದ ಪ್ರಸಂಗ ಇದಾಗಿದೆ. ಪಶ್ಚಿಮ ಘಟ್ಟದ ಅರಣ್ಯಗಳಲ್ಲಿ ಮರಗಳ್ಳತನ, ಅರಣ್ಯ ಸಂಪತ್ತಿನ ಲೂಟಿ ಪ್ರಕರಣಗಳು ಹೆಚ್ಚಾಗುತ್ತಿದ್ದ ಹಿನ್ನಲೆಯಲ್ಲಿ ಜನಜಾಗೃತಿ ಮೂಡಿಸುವ ಉದ್ದೇಶದಿಂದ ಈ ಪ್ರಸಂಗವನ್ನು ಬರೆಯಲಾಗಿದೆ.

**ಗ್ರಾಮಾಭ್ಯುದಯ** : ಕೆ. ವಿಶ್ವವಿನೋದ ಬನಾರಿಯವರು ಬರೆದ ಪ್ರಸಂಗ ಇದಾಗಿದೆ. ಗ್ರಾಮದ ಅಭಿವೃದ್ಧಿಯ ಅಗತ್ಯವನ್ನು ಪ್ರತಿಪಾದಿಸುವ ಉದ್ದೇಶವುಳ್ಳ ಪ್ರಸಂಗವಾಗಿದೆ. ಮದ್ಯವರ್ಜನ ಶಿಬಿರ, ಉದ್ಯೋಗ ಖಾತರಿ ಯೋಜನೆ ಇತ್ಯಾದಿಗಳ ಪ್ರಸ್ತಾಪ ಇಲ್ಲಿ ಬರುತ್ತದೆ.

**ಅರ್ಬುದಾಸುರ ಗರ್ವಭಂಗ** : ಪೊಳಲಿ ನಿತ್ಯಾನಂದ ಕಾರಂತರ ಪ್ರಸಂಗ ಇದಾಗಿದ್ದು, ವೈದ್ಯರುಗಳಾದ ಡಾ.ಪಿ.ಸತ್ಯಮೂರ್ತಿ ಐತಾಳ ಮತ್ತು ಡಾ.ಅಣ್ಣಯ್ಯ ಕುಲಾಲ್ ಅವರು 2019ರಲ್ಲಿ ಬರೆದಿದ್ದಾರೆ. ಕ್ಯಾನ್ಸರ್ ಬಗ್ಗೆ ಜನರಲ್ಲಿ ತಪ್ಪುಕಲ್ಪನೆ ಹೋಗಲಾಡಿಸಿ ಇದಕ್ಕೆ ಕಾರಣವಾಗುವ ವ್ಯಸನಗಳು, ನಿಯಂತ್ರಣದ ದಾರಿಗಳು, ಸಾಮಾನ್ಯ ತಿಳುವಳಿಕೆ ಇವನ್ನೆಲ್ಲ ಪರೋಕ್ಷವಾಗಿ ಈ ಪ್ರಸಂಗದಲ್ಲಿ ತಿಳಿಯಬಹುದಾಗಿದೆ.

**ರಾಮಧಾನ್ಯ ಚರಿತೆ** : ಪ್ರೊ.ಎಂ.ಎ.ಹೆಗಡೆಯವರು ಬರೆದ ಪ್ರಸಂಗ ಇದಾಗಿದೆ. 2019ರಲ್ಲಿ ಪ್ರಕಟವಾಗಿದೆ. ಕನಕದಾಸರ ಪ್ರಸಿದ್ಧ ರಾಮಧಾನ್ಯ ಚರಿತ್ರೆಯ ಆಧಾರದಲ್ಲಿ ಈ ಪ್ರಸಂಗ ರಚನೆಯಾಗಿದೆ. ಅಕ್ಕಿ ಮತ್ತು ರಾಗಿ ನಡುವೆ ನಡೆಯುವ ಮೇಲು ಕೀಳು ಚರ್ಚೆಯನ್ನು ಶ್ರೀ ರಾಮನು ಬಗೆ ಹರಿಸುವ ಚಿತ್ರಣ ಇದರಲ್ಲಿದೆ. ಪ್ರಮುಖವಾಗಿ ವರ್ಗಸಂಘರ್ಷದ ಪರಿಣಾಮಗಳೊಂದಿಗೆ ಸಾಮಾಜಿಕ ಸಾಮರಸ್ಯವನ್ನು ಸಮಾಜದಲ್ಲಿ ಬೆಳೆಸುವ ಅಗತ್ಯತೆಯನ್ನು ಈ ಕಥೆಯು ಪ್ರತಿಪಾದಿಸುತ್ತದೆ.

**ಸಂಜೀವಿನಿ** : ಕದ್ರಿ ನವನೀತ ಶೆಟ್ಟಿ ಹಾಗೂ ದಿನಕರ ಪಚ್ಚನಾಡಿ ಅವರು ಬರೆದ ಪ್ರಸಂಗ ಇದಾಗಿದ್ದು, ಕರ್ನಾಟಕದ ಕರಾವಳಿಯಲ್ಲಿ 2008ರಲ್ಲಿ ಚಿಕನ್ ಗುನ್ಯಾ ಹಾವಳಿ ಹೆಚ್ಚಾಗಿದ್ದಾಗ ಸಾಮಾಜಿಕ ಜಾಗೃತಿಗಾಗಿ ಈ ಪ್ರಸಂಗವವನ್ನು ಬರೆಯಲಾಗಿತ್ತು.

**ಕೊರೊನಾಸುರ(ಕೊರೊನಾ ಜಾಗೃತಿ ಯಕ್ಷಗಾನ)** : ಕೊರೊನಾಸುರ ಎಂಬ ಪ್ರಸಂಗವನ್ನು ಡಿ.ಎಸ್.ಶ್ರೀಧರ ಹಾಗೂ ಪ್ರೊ.ಎಂ.ಎ.ಹೆಗಡೆ

ಅವರು ಬರೆದಿದ್ದಾರೆ. ಜಗತ್ತಿನೆಲ್ಲೆಡೆ ಕೊರೋನ ಅಟ್ಟಹಾಸ ಮೆರೆದ 2020ರ ಮಾರ್ಚ್‌ನಲ್ಲಿ ಈ ಪ್ರಸಂಗವನ್ನು ಬರೆಯಲಾಗಿದೆ. ಕೊರೊನಾಸುರನ ಪ್ರವೇಶದೊಂದಿಗೆ ಪ್ರಸಂಗ ಆರಂಭವಾಗುತ್ತದೆ. ತನ್ನ ಹುಟ್ಟಿನ ಮೂಲ ಹಾಗೂ ಭಾರತವನ್ನು ಕಾಡುವ ಉದ್ದೇಶವನ್ನು ಹೇಳುತ್ತಾನೆ. ಈ ನಡುವೆ ವಿದ್ಯಾಭ್ಯಾಸಕ್ಕಾಗಿ ವಿದೇಶಕ್ಕೆ ಹೋಗಿದ್ದ ಮಣಿಕರ್ಣನೆಂಬ ಹುಡುಗ ಮರಳಿ ಬರುತ್ತಾ ಕೊರೋನಾಸುರನ ಹಿಡಿತಕ್ಕೆ ಸಿಲುಕುತ್ತಾನೆ. ಊರಿನಲ್ಲಿ ಅವನ ಒಡನಾಡಿಗಳಿಗೂ ಸೋಂಕು ಹರಡುತ್ತದೆ. ಮಣಿಕರ್ಣನ ತಂದೆ ತಾಯಿ, ಊರಮಂದಿ ಅರಸನಾದ ರಾಜೇಂದ್ರನಿಗೆ ಸಂಕಷ್ಟವನ್ನು ಹೇಳುತ್ತಾರೆ. ರಾಜೇಂದ್ರ ಅರಸ ಅವರಿಗೆ ದೈರ್ಯ ತುಂಬಿ ಮುನ್ನಚ್ಚೆರಿಕೆಯ ಮಾತುಗಳನ್ನಾಡಿ ಪರಿಹಾರಕ್ಕಾಗಿ ಧನ್ವಂತರಿಯ ಮೊರೆ ಹೋಗುತ್ತಾನೆ. ಧನ್ವಂತರಿ ಕೊರೊನಾಸುರನನ್ನು ಮಣಿಸುವುದರೊಂದಿಗೆ ಪ್ರಸಂಗ ಮುಕ್ತಾಯವಾಗುತ್ತದೆ. ಕೊರೋನ ಸಮಾಜದಲ್ಲಿ ಅಟ್ಟಹಾಸ ಮೆರೆದು ಸಾವು ನೋವಿಗೆ ಕಾರಣವಾಗಿದ್ದ ಕಾಲದಲ್ಲಿಯೇ ಕೋರೋನಾಸುರ ಜಾಗೃತಿ ಯಕ್ಷಗಾನವು ಸಾಮಾಜಿಕ ಜಾಲತಾಣ( ಯೂಟ್ಯೂಬ್) ಮೂಲಕ ಸಮಾಜದಲ್ಲಿ ಜನರಿಗೆ ಸಾಮಾಜಿಕ ಅಂತರ ಸೇರಿದಂತೆ ಸಾಮಾಜಿಕ ಜಾಗೃತಿ ಮೂಡಿಸುವಲ್ಲಿ ಪ್ರಮುಖ ಪಾತ್ರವಹಿಸಿತ್ತು.

ಹೀಗೆ ಯಕ್ಷಗಾನದ ಮೂಲಕ ಕೂಡಾ ಸಾಮಾಜಿಕವಾಗಿ ಜಾಗೃತಿ ಮೂಡಿಸುವ ಪ್ರಸಂಗಗಳು ಇನ್ನು ಕೂಡಾ ಹಲವಾರು ಇವೆ. ಪ್ರಮುಖವಾಗಿ ಧಾರ್ಮಿಕ, ಮನೋರಂಜನೆಯೊಂದಿಗೆ ಪುರಾಣ ಕಥೆಗಳ ಜೊತೆಗೆ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಲವಾರು ಕಾಲ್ಪನಿಕ ಪ್ರಸಂಗಗಳು ಕೂಡಾ ರಚನೆಗೊಂಡು ಸಮಾಜದಲ್ಲಿ ಜಾಗೃತಿ ಮೂಡಿಸುವ ಕಾರ್ಯವನ್ನು ಆಯಾ ಕಾಲಕ್ಕನುಸಾರವಾಗಿ ಮಾಡುತ್ತಾ ಬಂದಿರುವುದು ಯಕ್ಷಗಾನ ಕಲೆಯ ಹೆಗ್ಗಳಿಕೆಯಾಗಿದೆ. ಅಲ್ಲದೆ ಇಂದು ಆಧುನಿಕ ತಂತ್ರಜ್ಞಾನ ಹಾಗೂ ಮಾಧ್ಯಮ ಲೋಕದ ಮೂಲಕ ನಡೆಯುವ ಜಾಗೃತಿಯೊಂದಿಗೆ ಯಕ್ಷಗಾನ ಕಲಾ ಮಾಧ್ಯಮದ ಮೂಲಕ ಇಂತಹ ಸಾಮಾಜಿಕ ಜಾಗೃತಿ ಮೂಡಿಸುವ ಪ್ರಸಂಗಗಳು ಹೆಚ್ಚು ಪರಿಣಾಮಕಾರಿಯಾಗಿ ನಡೆದಿರುವುದು ಯಕ್ಷಗಾನ ಕಲೆಯ ಶ್ರೇಷ್ಠತೆ, ವ್ಯಾಪಕತೆಗೆ ಸಾಕ್ಷಿಯಾಗಿದೆ.